<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**ಸಿ.ಸಿ. ಸಂಖ್ಯೆಃ 54/2025**

**ಸಾಕ್ಷಿಯನ್ನು ದಿಃ 22.12.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ತಿಮ್ಮರಾಜನಾಯಕ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 3 |
| ತಂದೆಯ ಹೆಸರು | ಗೊವಿಂದನಾಯಕ | | |
| ವಯಸ್ಸು | 53 ವರ್ಷ | | |
| ಕೆಲಸ | ಪಿ.ಎಸ್.ಐ, ಹುಣಸೂರು | | |
| ವಾಸಸ್ಥಳ | ಹುಣಸೂರು | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನಾನು ಮಾರ್ಚ್ 2024 ರಿಂದ ಇಲ್ಲಿಯವರೆಗೆ ಹುಣಸೂರು ಪಟ್ಟಣ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 29.06.2024ರಂದು ನಾನು ಹಗಲು ಕರ್ತವ್ಯದಲ್ಲಿದ್ದಾಗ ಚಾಸಾ-1 ರವರ ಜೊತೆ ಹುಣಸೂರು ಪಟ್ಟಣದ ಗಸ್ತು ಕರ್ತವ್ಯ ಮಾಡುತ್ತಾ ಬಜಾರ್ ರಸ್ತೆಗೆ ಬೆಳಿಗ್ಗೆ 10-45 ಗಂಟೆಗೆ ಬಂದಾಗ ಗೋಕುಲ ರಸ್ತೆಯಲ್ಲಿ ಟ್ರಾಫಿಕ್ ಕರ್ತವ್ಯಕ್ಕೆ ನೇಮಕಗೊಂಡಿದ್ದ ಚಾಸಾ-2 ರವರು ಚಾಸಾ-1 ರವರಿಗೆ ಕರೆ ಮಾಡಿ, ಗೋಕುಲ ರಸ್ತೆಯಲ್ಲಿರುವ SRS ಅಂಗಡಿ ಮುಂಭಾಗ ರಸ್ತೆಯ ಮಧ್ಯೆದಲ್ಲಿ ಒಂದು ಕ್ಯಾಂಟರ್ ಗಾಡಿಯಲ್ಲಿ ಲಗೇಜ್ ಇಳಿಸುತ್ತಿದ್ದು, ಅದರ ಚಾಲಕ ಸದರಿ ವಾಹನವನ್ನು ತೆಗೆಯುತ್ತಿಲ್ಲ ಎಂದು ತಿಳಿಸಿದರು. ಆಗ ಚಾಸಾ-1 ರವರು ನನ್ನನ್ನು ಅವರ ಜೊತೆ ಕರೆದುಕೊಂಡು ಸದರಿ ಜಾಗಕ್ಕೆ ಹೋದೆವು. ಅಲ್ಲಿ ಹೋಗಿ ನೋಡಿದಾಗ SRS ಅಂಗಡಿಯ ಮುಂಭಾಗ ರಸ್ತೆಯ ಮಧ್ಯದಲ್ಲಿ ಕೆ.ಎ-09ಎಎ4724ರ ಅಶೋಕಾ ಲೆೈಲ್ಯಾಂಡ್ ಗೂಡ್ಸ್ ವಾಹನವನ್ನು ರಸ್ತೆಯ ಮಧ್ಯೆದಲ್ಲಿ ನಿಲ್ಲಿಸಿ ಅದರ ಚಾಲಕ ಲಗೇಜ್ ಇಳಿಸುತ್ತಿದ್ದ. ಆಗ ಚಾಸಾ-1 ರವರು ಸದರಿ ವಾಹನದ ಚಾಲಕನ ಬಳಿ ಈದಿನ ಶನಿವಾರ 11 ಗಂಟೆಗೆ ಶಾಲೆ ಬಿಡುತ್ತದೆ, ವಾಹನವನ್ನು ಪಕಕ್ಕೆ ಹಾಕಿ ಲಗೇಜ್ ಇಳಿಸುವಂತೆ ಸೂಚಿಸಿದರು. ಆಗ ಡ್ರೈವರ್ ಸದರಿ ವಾಹನದ ಚಾಲಕ ಏ ಕಣ್ಣು ಕಾಣಿಸುವುದಿಲ್ಲವೇ, ಲಗೇಜ್ ಇಳಿಸುತ್ತಿರುವುದು ಎಂದು ಹೇಳಿದ. ಆಗ ಚಾಸಾ-1ರವರು ಯಾಕೆ ಏರುಧ್ವನಿಯಲ್ಲಿ ಕೂಗುತ್ತಿಯಾ, ರಸ್ತೆಯ ಬದಿಯಲ್ಲಿವಾಹನ ಹಾಕಿ ಲಗೇಜ್ ಇಳಿಸು

ಎಂದು ಹೇಳಿದಾಗ ಸದರಿ ಚಾಲಕನ್ನು ಏಕಾ ಏಕಿ ಪಕ್ಕಕ್ಕೆ ನಿಲ್ಲಿಸುವುದಿಲ್ಲ ಏನು ಮಾಡಿಕೊಳ್ಳುತ್ತಿಯಾ, ಮಾಡಿಕೋ ಎಂದು ಹೇಳಿ ಏಕಾ ಏಕಿ ಚಾಸಾ-1 ರವರ ಸಮವಸ್ತ್ರದ ಕುತ್ತಿಗೆ ಪಟ್ಟಿಯನ್ನು ಹಿಡಿದು ಎಳೆದಾಡಿ, ಅವರ ಎಡಗೈಯನ್ನು ತಿರುಚಿದ. ಆಗ ನಾನು ಮತ್ತು ಚಾಸಾ-2 ರವ ರು ಹಾಗೂ ಸಾರ್ವಜನಿಕರಾದ ಚಾಸಾ-4 ಮತ್ತು 5 ರವರು ಹೋಗಿ ಬಿಡಿಸಿದೆವು. ನಂತರ ಸದರಿ ಚಾಲಕನ ಹೆಸರು ವಿಳಾಸ ಕೇಳಲಾಗಿ, ಮಧು ಬಿನ್ ಅಣ್ಣಪ್ಪ, 26 ವರ್ಷ, ಚಾಲಕ ಯರಗನಹಳ್ಳಿ ಟೆರಿಷಿಯನ್ ಕಾಲೇಜು, ಹಾಲಿ ವಾಸಃ 2ನೇ ಹಂತ, 3ನೇ ಕ್ರಾಸ್, ರಾಮದಾಸ ಬಡಾವಣೆ, ಶ್ರೀನಗರ, ಶ್ರೀರಾಮಪುರ, ಮೈಸೂರು ನಗರ ಎಂದು ತಿಳಿಸಿದ. ಚಾಸಾ-1ರವರು ಧರಿಸಿದ್ದ ಸಮವಸ್ತ್ರದ ಶರ್ಟ್ ನ ಗುಂಡಿ ಬಿದ್ದು ಹೋಗಿದ್ದು, ಅದನ್ನು ಹುಡುಕಿದರು ಸಿಗಲಿಲ್ಲ. ಆರೋಪಿ ಚಾಸಾ-1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿದ. ಆದ್ದರಿಂದ ಸದರಿ ವಾಹನ ಮತ್ತು ಆರೋಪಿಯನ್ನು ವಶಕ್ಕೆ ಪಡೆದು ಚಾಸಾ-11 ರವರ ಮುಂದೆ ಠಾಣೆಯಲ್ಲಿ ಹಾಜರುಪಡಿಸಿದೆವು. ನಂತರ ಚಾಸಾ-1 ರವರು ಈ ಬಗ್ಗೆ ದೂರನ್ನು ನೀಡಿದರು. ನಾನು ತನಿಖಾಧಿಕಾರಿಯ ಮುಂದೆ ಅದೇ ದಿನ ಹೇಳಿಕೆ ನೀಡಿದ್ದೇನೆ. ಆ ದಿನ ಚಾಸಾ-1 ರವರು ಧರಿಸಿದ್ದ ಸಮವಸ್ತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ-1ನ್ನು ನೋಡಿ ಗುರುತಿಸುತ್ತಾರೆ. ಆ ದಿನ ಸ್ಥಳದಲ್ಲಿದ್ದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-5 ರಿಂದ 8ರ ಬಾವಚಿತ್ರಗಳಲ್ಲಿ ಸದರಿ ವಾಹನವನ್ನು ನೋಡಿ ಗುರುತಿಸುತ್ತಾರೆ. ಆದಿನ ಚಾಸಾ-1 ರವರ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ. ಬಿ.ಕೆ.ಎಸ್ ವಕೀಲರಿಂದಃ**

ಕಾಲಾವಕಾಶ ಕೋರಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.